# ಏನಿದು ಬಿಟ್‌ಕಾಯಿನ್?

■ **ಶಶಿಕುಮಾರ್ ಸಿ.**

ಕಾಯಿನ್ ಅಂದ್ರೆ ನಾಣ್ಯ ಎಂದರ್ಥ. ಬಿಟ್‌ಕಾಯಿನ್ ಅನ್ನೋ ಪದದಲ್ಲೂ ಕಾಯಿನ್ ಎಂಬ ಪದ ಇರುವುದರಿಂದ ಬಿಟ್‌ಕಾಯಿನ್ ಅನ್ನು ₹1, ₹2, ₹5, ₹10 ನಾಣ್ಯಗಳಿದ್ದಂತೆ ಎಂದು ಭಾವಿಸುವವರಿದ್ದಾರೆ. ಆದರೆ, ವಾಸ್ತವದಲ್ಲಿ ಈ ನಾಣ್ಯಗಳಂತೆ ಬಿಟ್‌ಕಾಯಿನ್ ಇರುವುದಿಲ್ಲ. ಅದು ವರ್ಚುವಲ್ ಸ್ವರೂಪದ ಅಥವಾ ಡಿಜಿಟಲ್ ರೂಪದ ನಗದು ಅಷ್ಟೆ. ಡಿಜಿಟಲ್ ಕೂಪನ್ ಅಂತಲೂ ಭಾವಿಸಬಹುದು. ಇದಕ್ಕೆ ಭಾರತದಲ್ಲಿ ಮಾನ್ಯತೆ ಇಲ್ಲ.

'ಕ್ರಿಪ್ಟೊಕರೆನ್ಸಿ' ಸಹ ಡಿಜಿಟಲ್ ರೂಪದ ನಗದು. ನಿಯಂತ್ರಣರಹಿತವಾದ ಈ ಕರೆನ್ಸಿಯ ವ್ಯವಸ್ಥಿತ ವಿನಿಮಯಕ್ಕಾಗಿ ಅತ್ಯಾಧುನಿಕ ತಂತ್ರಜ್ಞಾನ ಬಳಸಿಕೊಳ್ಳಲಾಗುತ್ತದೆ. ಕ್ರಿಪ್ಟೊಕರೆನ್ಸಿಯಲ್ಲಿ ನಾನಾ ವಿಧಗಳಿವೆ. ಆ ಪೈಕಿ ಹೆಚ್ಚು ಚಾಲ್ತಿಯಲ್ಲಿ ಇರುವಂತಹದ್ದು ಹಾಗೂ ಹೆಚ್ಚು ಪ್ರಸಿದ್ಧವಾದದ್ದು ಬಿಟ್‌ಕಾಯಿನ್. ಮತ್ತೊಂದು ಅಲ್ಟ್‌ಕಾಯಿನ್ಸ್.



ಬಿಟ್‌ಕಾಯಿನ್ ವಹಿವಾಟು ವಿಕೇಂದ್ರೀಕೃತ ವ್ಯವಸ್ಥೆಗೆ ಒಳಪಟ್ಟಿದೆ. ಮಧ್ಯವರ್ತಿಯೊಬ್ಬರು ಬ್ಯಾಂಕ್‌ನ ನೆರವಿಲ್ಲದೇ ಬಿಟ್‌ಕಾಯಿನ್‌ಗಳ ಖರೀದಿ, ಮಾರಾಟ ಅಥವಾ ವಿನಿಮಯ ಮಾಡಬಹುದು. ಅಂತರ್ಜಾಲದ ಮೂಲಕ ವರ್ಗಾವಣೆ ಮಾಡಬಹುದು. ಕಡಿಮೆ ಶುಲ್ಕ ಹಾಗೂ ಅತ್ಯಂತ ವೇಗವಾಗಿ ಜಗತ್ತಿನ ಯಾವುದೇ ಮೂಲೆಗಾದರೂ ವರ್ಗಾಯಿಸಬಹುದು. ಕ್ರಿಪ್ಟೊಗ್ರಫಿ ಎಂಬ ತಂತ್ರಜ್ಞಾನದ ಮೂಲಕ ಕಾರ್ಯ ನಿರ್ವಹಿಸುವ ಸುರಕ್ಷಿತ ವ್ಯವಸ್ಥೆ ಇದಾಗಿದ್ದರೂ – ರಾಜ್ಯದಲ್ಲಿ ಬಿಟ್‌ಕಾಯಿನ್ ಹಗರಣದಲ್ಲಿ ಸಿಲುಕಿರುವ ಶ್ರೀಕೃಷ್ಣ ಅಲಿಯಾಸ್ ಶ್ರೀಕಿಯಂತಹ ಚಾಲಾಕಿ ಹ್ಯಾಕರ್‌ಗಳು ಇಂಥ ಸುರಕ್ಷಿತ ವ್ಯವಸ್ಥೆಯಲ್ಲೂ ಆತಂಕ ಉಂಟುಮಾಡಬಲ್ಲರು.

ಕ್ರಿಪ್ಟೊಕರೆನ್ಸಿಯ ಹಲವು ವಿಧಗಳು ಮಾರುಕಟ್ಟೆಯಲ್ಲಿವೆ. ಹಲವು ಡಿಜಿಟಲ್ ಕರೆನ್ಸಿಗಳು ಬಿಟ್‌ಕಾಯಿನ್‌ನಂತಿದ್ದರೂ, ಬಿಟ್‌ಕಾಯಿನ್ ಗಳಿಸಿರುವ ಜನಪ್ರಿಯತೆಯ ಮಟ್ಟಕ್ಕೆ ತಲುಪಲು ಮಿಕ್ಕ ಡಿಜಿಟಲ್ ಕರೆನ್ಸಿಗಳಿಗೆ ಸಾಧ್ಯವಾಗಿಲ್ಲ. ಅದಕ್ಕೆ ಬಿಟ್‌ಕಾಯಿನ್‌ನ ಅನನ್ಯ ತಂತ್ರಜ್ಞಾನ ಹಾಗೂ ಸುರಕ್ಷತಾ ವಿಧಾನಗಳೂ ಕಾರಣ ಎನ್ನಬಹುದು.

ಪ್ರತೀ ಬಿಟ್‌ಕಾಯಿನ್ ವಹಿವಾಟು ಸಾರ್ವಜನಿಕ ಡೊಮೈನ್‌ನಲ್ಲಿ ಲಭ್ಯವಿರುವಂತೆ ಬ್ಲಾಕ್‌ಚೈನ್ ತಂತ್ರಜ್ಞಾನ ರೂಪಿಸಲಾಗಿದೆ. ಏನೆಲ್ಲ ವಹಿವಾಟು ನಡೆಯುತ್ತಿದೆ ಎಂಬ ಪ್ರತಿ ಅಂಶವೂ ಡೊಮೈನ್‌ನಲ್ಲಿ ದಾಖಲಾಗುತ್ತದೆ. ಪ್ರತಿಯೊಬ್ಬ ಖಾತೆದಾರನಿಗೂ ಈ ಮಾಹಿತಿ ಸಿಗುವ ವ್ಯವಸ್ಥೆ ರೂಪಿಸಲಾಗಿದೆ. ಬಿಟ್‌ಕಾಯಿನ್‌ಗಳನ್ನು ನಕಲು ಮಾಡಲು ಸಾಧ್ಯವಿಲ್ಲ. ಚಿನ್ನದಂತೆ ಮೌಲ್ಯಯುತವಾದದ್ದು ಈ ಬಿಟ್‌ಕಾಯಿನ್. ಚಿನ್ನದ ದರ ಏರಿಳಿಕೆಯಾಗುವಂತೆ ಬಿಟ್‌ಕಾಯಿನ್‌ನ ಮೌಲ್ಯವೂ ದಿನದಿಂದ ದಿನಕ್ಕೆ ಏರಿಳಿತವಾಗುತ್ತಲೇ ಇರುತ್ತದೆ.

## ಬ್ಲಾಕ್‌ಚೈನ್ ಎಂದರೇನು?

ಬಿಟ್‌ಕಾಯಿನ್ ದತ್ತಾಂಶಗಳನ್ನು ಒಳಗೊಂಡ ಕಂಪ್ಯೂಟರ್‌ನ ಕಡತವೇ ಬ್ಲಾಕ್‌ಚೈನ್. ಪ್ರತಿ ಬಿಟ್ ಕಾಯಿನ್ ಮಾರಾಟ, ಖರೀದಿ, ವರ್ಗಾವಣೆಯ ದಿನಾಂಕ, ಸಮಯ, ಮೌಲ್ಯ, ಖರೀದಿದಾರ, ಮಾರಾಟಗಾರ ಮತ್ತು ಪ್ರತೀ ವಹಿವಾಟಿಗೆ ನೀಡಲಾಗುವ ಕೋಡ್ ಸೇರಿದಂತೆ ಅನೇಕ ಅಂಶಗಳು ಈ ತಂತ್ರಾಂಶದಲ್ಲಿ ಪ್ರತ್ಯೇಕ ಘಟಕಗಳ ರೂಪದಲ್ಲಿ ದಾಖಲಾಗುತ್ತವೆ. ಇಲ್ಲಿ ದಾಖಲಾಗುವ ಪ್ರತಿಯೊಂದು ಘಟಕವನ್ನು ಕಾಲಾನುಕ್ರಮದಲ್ಲಿ ಒಟ್ಟಿಗೆ ಜೋಡಿಸಿದಾಗ, ಅದು ಡಿಜಿಟಲ್ ಸರಪಳಿ ಅಥವಾ ಬ್ಲಾಕ್‌ಚೈನ್ ಆಗಿ ರೂಪುಗೊಳ್ಳುತ್ತದೆ. ಬ್ಲಾಕ್‌ಚೈನ್ ಎಂಬುದು ಕ್ರಿಪ್ಟೋಕರೆನ್ಸಿ ವಹಿವಾಟಿನ ಸಾರ್ವಜನಿಕ ಲೆಡ್ಜರ್.

## ರೂವಾರಿ ಯಾರು?

ಅಲಿಯಾಸ್ ಸತೋಶಿ ನಕಮೋಟೊ (Alias Satoshi Nakamoto) ಎಂಬ ಅನಾಮಿಕ ವ್ಯಕ್ತಿಯ ಹೆಸರಿನಲ್ಲಿ ಮೊದಲ ಬಾರಿಗೆ 2009ರಲ್ಲಿ ಈ ಬಿಟ್‌ಕಾಯಿನ್ ವಹಿವಾಟು ನಡೆಸಲಾಗಿದೆ. ಆ ವ್ಯಕ್ತಿ ಯಾರು, ಎಲ್ಲಿದ್ದಾನೆ, ಹೇಗಿದ್ದಾನೆ ಎಂಬ ಮಾಹಿತಿ ಯಾರಿಗೂ ಗೊತ್ತಿಲ್ಲ. ಪ್ರಾರಂಭದಲ್ಲಿ ಪ್ರತಿ ಬಿಟ್‌ಕಾಯಿನ್ ಬೆಲೆ ₹100 ಇತ್ತು. ಆದರೀಗ ಪ್ರತಿ ಬಿಟ್‌ಕಾಯಿನ್ ಬೆಲೆ 2021ರ ನವೆಂಬರ್ 16ಕ್ಕೆ ₹44 ಲಕ್ಷಕ್ಕೆ (₹44,27,276.09) ತಲುಪಿದೆ.

## ಎಲ್ಲಿ ಸಂಗ್ರಹಿಸಿಡಬಹುದು?

ಬಿಟ್‌ಕಾಯಿನ್‌ಗಳನ್ನು ಕಂಪ್ಯೂಟರ್ ಅಥವಾ ಸ್ಮಾರ್ಟ್‌ಫೋನ್ ಆ್ಯಪ್‌ನಲ್ಲಿರುವ 'ಡಿಜಿಟಲ್ ವ್ಯಾಲೆಟ್'ನಲ್ಲಿ ಸಂಗ್ರಹಿಸಿಡಬಹುದು. ಡಿಜಿಟಲ್ ವ್ಯಾಲೆಟ್ ಎಂಬುದು ಪೇಟಿಎಂ, ಫೋನ್‌ಪೇ, ಗೂಗಲ್ ಪೇ ಆ್ಯಪ್‌ಗಳಲ್ಲಿನ ವಾಲೆಟ್ ಇದ್ದಂತೆ.

## ಖರೀದಿ ಹೇಗೆ?

ಬಿಟ್‌ಕಾಯಿನ್ ಖರೀದಿಸಬೇಕಾದರೆ ಆನ್‌ಲೈನ್‌ನಲ್ಲಿ ಸಂಬಂಧಪಟ್ಟ ವೆಬ್‌ಸೈಟ್‌ಗಳಲ್ಲಿ ಖಾತೆ ತೆರೆದು, ಕ್ರಿಪ್ಟೊಕರೆನ್ಸಿ ಎಕ್ಸ್‌ಚೇಂಜ್ ಮೂಲಕ ಖರೀದಿ ಮಾಡಬಹುದು. ಅದಕ್ಕಾಗಿ ಗುರುತಿನ ದಾಖಲೆಗಳನ್ನು ಒದಗಿಸಬೇಕು. ಕೇವಲ ನೂರು ರೂಪಾಯಿ ಹೂಡಿಕೆ ಮಾಡಿ ಬಿಟ್‌ಕಾಯಿನ್‌ನ ಒಂದು ಭಾಗವನ್ನು ಖರೀದಿಸಬಹುದು. ■


ವಶೀಕರಣ ಸ್ಪೆಷಲಿಸ್ಟ್



ಶ್ರೀರಾಘವೇಂದ್ರಸ್ವಾಮಿ ಜ್ಯೋತಿಷ್ಯಾಲಯ
ಗುರೂಜಿ ಮಹೇಶ್‌ಭಟ್

ಇಲ್ಲಿದೆ ದೇವಿ ಅಘೋರಿ ಶಕ್ತಿಗಳ ಭಂಡಾರ, ದುಷ್ಟ ಅಘೋಚರ ಶಕ್ತಿಗಳು ಆಡಿಸುವ ಆಟದಿಂದ ಮನುಷ್ಯನು ತಾನು ಬಯಸಿದಂತೆ ಸುಖ ಜೀವನವನ್ನು ಸಾಧಿಸಲು ಸಿದ್ಧಿಸಾಧಕರ ಸಹಕಾರ, ನಿಮ್ಮ ಜೀವನಕ್ಕೆ ಪ್ರಮುಖವಾದದ್ದು, ಅಂತಹ ಸಿದ್ಧಿಸಾಧಕರಾದ
"ಗುರೂಜಿ ಮಹೇಶ್‌ಭಟ್"
ಇವರಿಂದ ಮಾತ್ರ ಈ ಸಾಧನೆ ಸಾಧ್ಯ

ಇವರು ಕೇರಳ ಬಂಗಾಳಿ, ಅಘೋರಿ, ನಾಗಸಾಧುಗಳ ಋಷಿಮುನಿಗಳ ಬಳಿ ಪ್ರಾಚೀನ ತಾಳೆಗ್ರಂಥದ ರಹಸ್ಯ, ಮಂತ್ರ-ತಂತ್ರ ದೇವಿಶಕ್ತಿ ಕಠೋರ ಸಾಧನೆಯಿಂದ ಯಾಗ ಯಜ್ಞಗಳ ಮೂಲಕ ಸಿದ್ಧಿ ಮಾಡಿಕೊಂಡಿರುತ್ತಾರೆ.

ವಿದ್ಯೆ, ಉದ್ಯೋಗ, ಶತ್ರುಭಯ, ಪ್ರೇಮವಿಚಾರ, ವಿವಾಹ, ಸಂತಾನ, ಮಾಟಮಂತ್ರ, ಶತ್ರುನಾಶ, ಲೈಂಗಿಕ, ಸಂಮ್ಮೋಹಿನಿ, ಜಾಗದ ವಿಚಾರ, ಬಿಸಿನೆಸ್, ವಿದೇಶ ಪ್ರಯಾಣ, ಸಾಲಬಾಧೆ, ಕೋರ್ಟ್‌ಕೇಸ್, ಗುಪ್ತಸಮಸ್ಯೆ, ಇನ್ನಿತರ ಯಾವುದೇ ಕಠಿಣ ಸಮಸ್ಯೆಯಿರಲಿ ಸಿದ್ಧಿಸಾಧನೆಯಿಂದ ಶಾಸ್ತ್ರೀಯ ಪದ್ಧತಿಯಲ್ಲಿ
ಕೆಲವೇ ಗಂಟೆಗಳಲ್ಲಿ ಪರಿಹಾರ ಮಾಡುತ್ತಾರೆ.

ವಿಶೇಷ ಸೂಚನೆ: ಜನವಶೀಕರಣ, ಲಕ್ಷ್ಮೀವಶೀಕರಣ, ಸ್ತ್ರೀಪುರುಷ ವಶೀಕರಣ, ಶತ್ರುವಶೀಕರಣಗಳಿಗೆ ಕೆಲವೇ ಗಂಟೆಗಳಲ್ಲಿ ಪರಿಹಾರ.

ನಮ್ಮನ್ನು ಭೇಟಿಯಾಗುವ ಅವಶ್ಯಕತೆಯಿಲ್ಲ ಒಮ್ಮೆ ಕರೆಮಾಡಿ ನಿಮ್ಮೆಲ್ಲ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಪಡೆಯಿರಿ.
ನಮ್ಮಲ್ಲಿ ಕೇಳುವ ನಿಮ್ಮೆಲ್ಲ ವಿಷಯಗಳನ್ನು ಗುಪ್ತವಾಗಿಡಲಾಗುವುದು.
ನಿಮ್ಮ ಸಮಸ್ಯೆಗಳನ್ನು ಯಾರಿಂದಲೂ ಬಗೆಹರಿಸಲು ಸಾಧ್ಯವಿಲ್ಲ, ನಮ್ಮಿಂದ ಮಾತ್ರಸಾಧ್ಯ ಪರಿಹಾರ ಬೇಕಿದ್ದಲ್ಲಿ ಒಮ್ಮೆ ಕರೆಮಾಡಿ

ಗುರೂಜಿ ಮಹೇಶ್‌ಭಟ್
9686999517